ಇಲಾಖೆ / ವಿಷಯ : DEPARTMENT / SUBJECT: ಮುಖ್ಯಮಂತ್ರಿ

ಪತ್ರಿಕೆಯ ಹೆಸರು : NAME OF THE NEWS PAPER: ವಿಜಯ ಕರ್ನಾಟಕ ದಿನಾಂಕ : DATE 9/9/2020

# ಸಂಪುಟ ವಿಸ್ತರಣೆ ಅನುಮಾನ

9-9-2020

**ಬೆಂಗಳೂರು:** ದಿಲ್ಲಿಗೆ ತೆರಳುವ ಬಗ್ಗೆ ಇನ್ನೂ ನಿರ್ಧರಿಸಿಲ್ಲ ಎಂದಿರುವ ಯಡಿಯೂರಪ್ಪ, ಸದ್ಯಕ್ಕೆ ಸಂಪುಟ ವಿಸ್ತರಣೆ ಅನುಮಾನ ಎಂಬ ಸುಳಿವು ಬಿಟ್ಟುಕೊಟ್ಟಿದ್ದಾರೆ.

ಈ ಬಗ್ಗೆ ವಿಧಾನಸೌಧದಲ್ಲಿ ಸುದ್ದಿಗಾರರಿಗೆ ಪ್ರತಿಕ್ರಿಯಿಸಿ, ''ದಿಲ್ಲಿ ಪ್ರವಾಸದ ಬಗ್ಗೆ ತೀರ್ಮಾನವಾಗಿಲ್ಲ. ಇದಕ್ಕೆ ದಿನಾಂಕವೂ ನಿಗದಿಯಾಗಿಲ್ಲ'' ಎಂದಿದ್ದಾರೆ.

ಈ ಬಾರಿಯ ಅಧಿವೇಶನ ಸರಕಾರಕ್ಕೆ ಸವಾಲಾಗಿರುವುದರಿಂದ ಸಂಪುಟ ಸದಸ್ಯರೊಂದಿಗೆ ಸಿಎಂ ಸೋಮವಾರ ಸಭೆ ನಡೆಸಿದ್ದರು. ಪ್ರವಾಹ ಪರಿಹಾರ, ರಾಜ್ಯದ ಅಭಿವೃದ್ಧಿ ಯೋಜನೆಗೆ ನೆರವು ಕೇಳಲು ದಿಲ್ಲಿಗೆ ಭೇಟಿ ನೀಡಲಾಗುವುದು. ಸಾಧ್ಯವಾದರೆ ಸಂಪುಟ ವಿಸ್ತರಣೆ ಬಗ್ಗೆಯೂ ಚರ್ಚಿಸಲಾಗುವುದು. ಹೈಕಮಾಂಡ್ ಕೈಗೊಳ್ಳುವ ನಿರ್ಧಾರಕ್ಕೆ ಎಲ್ಲರೂ ಬದ್ಧರಾಗಿರಬೇಕಾಗುತ್ತದೆ ಎಂದು ಸಭೆಯಲ್ಲಿ ಹೇಳಿದ್ದರು ಎನ್ನಲಾಗಿತ್ತು. ಹೀಗಾಗಿ ಸಂಪುಟ ವಿಸ್ತರಣೆಯ ಚರ್ಚೆ ಶುರುವಾಗಿತ್ತು. ಸಿಎಂ ದಿಲ್ಲಿಗೆ ಹೋಗಲು ಸಿದ್ಧರಾಗಿದ್ದರೂ ಹೈಕಮಾಂಡ್‌ನಿಂದ ಈವರೆಗೆ ಯಾವುದೇ ಸಿಗ್ನಲ್ ಬಂದಿಲ್ಲ. ಈ ತಿಂಗಳ 14ರಿಂದ ಸಂಸತ್ ಅಧಿವೇಶನ ಇರುವುದರಿಂದ ಈ ಬಗ್ಗೆ ಸಮಾಲೋಚಿಸಲು ವರಿಷ್ಠರು ಲಭ್ಯರಾಗುವುದೂ ಕಷ್ಟ ಎಂದು ಹೇಳಲಾಗುತ್ತಿದೆ.